# <u>ನಗರಸಭಾ ಕಾರ್ಯಾಲಯ, ತುಮಕೂರು.</u>

ನಂ.ನಸತು/ತಾಂಶಾ/ಟೆಂಡರ್/ಸೀಆರ್/ /2008–09 ದಿನಾಂಕ: 24–07–2009.

## <u>ಅಲ್ಪಾವಧಿ ಟೆಂಡರ್ ಪ್ರಕಟಣೆ</u>

ತುಮಕೂರು ನಗರಸಭಾ ವ್ಯಾಪ್ತಿಯ ಎಸ್.ಎಸ್.ಐ.ಟಿ. ಕಾಲೇಜಿನ ಹಿಂಭಾಗದ ಆವರಣದಲ್ಲಿ ಹಾಕಲಾಗಿರುವ ಘನತ್ಯಾಜ್ಯ ವಸ್ತುವನ್ನು ನಗರದಿಂದ ದೊಡ್ಡಬಳ್ಳಾಪುರದ ಬಳಿ ಇರುವ ಟೆರಾಫಾರಂಗೆ ಸಾಗಿಸಲು ಟೆಂಡರ್ ಕರೆಯಲಾಗಿದ್ದು, ಆಸಕ್ತಿಯುಳ್ಳ ಸ್ವಂತ ವಾಹನ ಹೊಂದಿರುವ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು.

1. ಟೆಂಡರ್ ಫಾರಂಗಳನ್ನು ನೀಡುವ **ದಿನಾಂಕ 25–07–2009 ರಿಂದ 10–08–2009** ರವರಗೆಗೆ ಕಛೇರಿಯ ವೇಳೆಯಲ್ಲಿ ಟೆಂಡರ್ ಶುಲ್ಕ ಪಾವತಿಸಿದ ಅರ್ಹ ಗುತ್ತಿಗೆದಾರರಿಗೆ ನೀಡಲಾಗುವುದು.
2. ಭರ್ತಿ ಮಾಡಿದ ಫಾರಂಗಳನ್ನು **ದಿನಾಂಕ 11–08–2009 ರಂದು 4.30 ಗಂಟೆಯೊಳಗಾಗಿ** ಪೌರಾಯುಕ್ತರು, ನಗರಸಭೆ, ತುಮಕೂರು ರವರ ಕೊಠಡಿಯಲ್ಲಿ ಇಟ್ಟಿರುವ ಟೆಂಡರ್ ಬಾಕ್ಸ್‌ನಲ್ಲಿ ಅಥವಾ ಮಾನ್ಯ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ರವರ ಕಛೇರಿಯ ಟೆಂಡರ್ ಬಾಕ್ಸ್‌ನಲ್ಲಿ ಹಾಕಬಹುದಾಗಿದೆ.
3. **ಸಲ್ಲಿಸಲಾಗಿರುವ ಟೆಂಡರ್‌ಗಳನ್ನು ಸಾಧ್ಯವಾದರೆ ದಿನಾಂಕ 11–08–2009 ರಂದು 4.45** ಗಂಟೆಗೆ ಹಾಜರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ಅಥವಾ ಮರುದಿನ ಕಛೇರಿ ವೇಳೆಯಲ್ಲಿ ಹಾಜರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವುದು.

| **ಕ್ರ.ಸಂ.** | **ಕಾಮಗಾರಿ ಹೆಸರು** | **ಅಂದಾಜು ಲಭ್ಯವಿರುವ ಘನತ್ಯಾಜ್ಯ ವಸ್ತು** | **ಇಎಂಡಿ ಮೊತ್ತ ರೂಗಳಲ್ಲಿ** | **ಟೆಂಡರ್ ಫಾರಂ ಬೆಲೆ** | **ಗುತ್ತಿಗೆದಾರರು** | **ಕಾಲಾವಧಿ** |
|---|---|---|---|---|---|---|
| 1 | ಎಸ್.ಎಸ್.ಐ.ಟಿ. ಕಾಲೇಜು ಹಿಂಭಾಗದ ಆವರಣದಲ್ಲಿ ಹಾಕಿರುವ ಘನತ್ಯಾಜ್ಯ ವಸ್ತುವನ್ನು ದೊಡ್ಡಬಳ್ಳಾಪುರ ಹತ್ತಿರ ಇರುವ ಟೆರಾಫಾರಂಗೆ ಸಾಗಿಸುವುದು. (ಲೋಡಿಂಗ್ ಅನ್‌ಲೋಡಿಂಗ್ ಸೇರಿ ದರ ನಮೂದಿಸುವುದು) | 6000 ಮೆಟ್ರಿಕ್ ಟನ್‌ಗಳು | 20000.00 | 500+ ತೆರಿಗೆ | ಈ ಹಿಂದೆ ಇಂತಹದೆ ಕೆಲಸ ನಿರ್ವಹಿಸಿದ ಅನುಭವವಿರಬೇಕು | 45 ದಿನಗಳು |

## <u>ಷರತ್ತುಗಳು</u>

1. ಟೆಂಡರ್ ಫಾರಂ ಬೆಲೆಯನ್ನು ನಗದಾಗಿ ನಗರಸಭೆಯ ನಗದು ಶಾಖೆಯಲ್ಲಿ ಪಾವತಿಸಿ ಅರ್ಜಿ ಸಲ್ಲಿಸಬಹುದಾಗಿದೆ.
2. ಇಎಂಡಿ ಹಣವನ್ನು ಪೌರಾಯುಕ್ತರು, ನಗರಸಭೆ, ತುಮಕೂರು ಇವರ ಹೆಸರಿಗೆ ಜಮಾ ಮಾಡಬಹುದಾದಂತಹ ಡಿಡಿ / ಎಫ್‌ಡಿಆರ್‌ಗಳನ್ನು ಅಥವಾ ನಗರಸಭಾ ಕಾರ್ಯಾಲಯದಲ್ಲಿ ಜಮಾ ಮಾಡಿ ರಸೀದಿಯೊಂದಿಗೆ ಟೆಂಡರ್ ಜೊತೆಯಲ್ಲಿ ಸಲ್ಲಿಸಬೇಕು.
3. ಟೆಂಡರ್ ಫಾರಂನಲ್ಲಿ ದರವನ್ನು ಅಂಕಿ ಮತ್ತು ಅಕ್ಷರಗಳಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.
4. ಮೇಲೆ ನಿಗಧಿಪಡಿಸಿರುವ ಯಾವುದೇ ದಿನಾಂಕಗಳು ಸರ್ಕಾರಿ ರಜಾ ದಿನಗಳೆಂದು ಘೋಷಿಸಲ್ಪಟ್ಟಲ್ಲಿ ಮುಂದಿನ ಕೆಲಸದ ದಿನವನ್ನು ಪರಿಗಣಿಸಲಾಗುವುದು.
5. ನಿಬಂಧನೆಗಳನ್ನು ನಮೂದಿಸಿ ಸಲ್ಲಿಸುವ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
6. ಯಾವ ಕಾರಣವನ್ನು ಸಹ ನೀಡದೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.
7. ಮೇಲಿನ ಕಾಮಗಾರಿಯಲ್ಲಿ ಏನಾದರೂ ಸೇರ್ಪಡೆ ಅಥವಾ ಮಾರ್ಪಡಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.
8. ಕಾಮಗಾರಿಗೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ಗುತ್ತಿಗೆದಾರರೇ ಒದಗಿಸಿಕೊಳ್ಳತಕ್ಕದ್ದು.
9. ಗುತ್ತಿಗೆದಾರರು ಟೆಂಡರ್ ಸಲ್ಲಿಸುವಾಗ 'ಬಿ' ಷೆಡ್ಯೂಲ್‌ನಲ್ಲಿ ದರಗಳನ್ನು ನಮೂದಿಸುವಾಗ ಸ್ಪಷ್ಟವಾಗಿ ಒಂದೇ ರೀತಿಯ ಬರವಣಿಗೆಯಲ್ಲಿ ಪ್ರತಿ ಪುಟಕ್ಕೂ ಸಹಿಯೊಂದಿಗೆ ಯಾವುದೇ ರೀತಿಯ ವ್ಯತ್ಯಾಸವಾಗದಂತೆ ನಮೂದಿಸಬೇಕು. ಇಲ್ಲವಾದಲ್ಲಿ ಟೆಂಡರ್‌ಗಳನ್ನು ಪರಿಗಣಿಸಲಾಗುವುದಿಲ್ಲ.
10. ಈ ಕಾಮಗಾರಿಗಳಿಗೆ ಕಾರ್ಯಾದೇಶದ ನೀಡಿದ ದಿನಾಂಕದಿಂದ 24 ಗಂಟೆಗಳೊಳಗಾಗಿ ಖಡ್ಡಾಯವಾಗಿ ಕಾಮಗಾರಿ ಪ್ರಾರಂಭಿಸತಕ್ಕದ್ದು.

11. ಸದರಿ ಕಾಮಗಾರಿ ನಿರ್ವಹಿಸಲು ಸ್ವಂತ ವಾಹನ ಹೊಂದಿರುವ ಬಗ್ಗೆ ಅಗತ್ಯ ದಾಖಲೆಗಳನ್ನು ಸಲ್ಲಿಸತಕ್ಕದ್ದು. ಅಥವಾ ಬಾಡಿಗೆ ಆಧಾರದ ಮೇಲೆ ಪಡೆದಿದ್ದಲ್ಲಿ ಅಗತ್ಯ ದಾಖಲೆಗಳನ್ನು ಸಲ್ಲಿಸತಕ್ಕದ್ದು.

12. ಎಲ್ಲಾ ಸರ್ಕಾರಿ ರಜಾ ದಿನಗಳಲ್ಲಿ ಕೆಲಸ ನಿರ್ವಹಿಸುವುದು. ಯಾವುದೇ ಕಾರಣಕ್ಕೂ ನೀರು ಸರಬರಾಜನ್ನು ನಿಲ್ಲಿಸುವುದಕ್ಕೆ ಅವಕಾಶವಿರುವುದಿಲ್ಲ.

13. ಸದರಿ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಯಾವುದೇ ಅಪಘಾತಗಳು ಉಂಟಾದಲ್ಲಿ / ಪ್ರಾಣ ಹಾನಿ ಉಂಟಾದಲ್ಲಿ ನಗರಸಭೆ ಜವಾಬ್ದಾರರಾಗಿರುವುದಿಲ್ಲ.

14. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: www.tumkurcity.gov.in ಹಾಗೂ ನಗರಸಭೆ ತಾಂತ್ರಿಕ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

| | | |
|---|---|---|
| ಸಹಿ/– | ಸಹಿ/– | ಸಹಿ/– |
| **ಅಧ್ಯಕ್ಷರು** | **ಉಪಾಧ್ಯಕ್ಷರು** | **ಪೌರಾಯುಕ್ತರು** |
| **ನಗರಸಭೆ, ತುಮಕೂರು.** | **ನಗರಸಭೆ, ತುಮಕೂರು.** | **ನಗರಸಭೆ, ತುಮಕೂರು.** |